



ಅರುಣ ಪಿ. ಭಟ್ಟ


## ವಾರಭವಿಷ್ಯ: 03.04.2025ರಿಂದ 09.04.2025ರವರೆಗೆ




ಸನ್ಮಾನ ಯೋಗವಿದೆ. ದೇವಾಲಯ ತೀರ್ಥಕ್ಷೇತ್ರ ದರ್ಶನ ಮಾಡುವಿರಿ. ಮನೆಗೆ ನೆಂಟರಿಷ್ಟರ ಆಗಮನದಿಂದ ಸಂತಸದ ವಾತಾವರಣ ಕಂಡುಬರುತ್ತದೆ. ಆರ್ಥಿಕವಾಗಿ ಆದಾಯವು ಹೆಚ್ಚಾಗುವ ಸಾಧ್ಯತೆ ಇದೆ. ನಿರೀಕ್ಷಿತ ಕಾರ್ಯಗಳು ಸರಾಗವಾಗಿ ನಡೆಯಲಿವೆ. ಬರತಕ್ಕ ಬಾಕಿ ಹಣ ಬರುವ ಸಾಧ್ಯತೆಗಳಿವೆ. ವಾರಾಂತ್ಯದಲ್ಲಿ ಆರೋಗ್ಯ ಏರುಪೇರಾಗಬಹುದು. ಶುಭದಿನ: 06. ಲಕ್ಷ್ಮೀನರಸಿಂಹ ಸ್ತೋತ್ರ ಜಪಿಸಿರಿ.




ನಿಮ್ಮ ಕೆಲಸಗಳು ದೈವ ಪ್ರೇರಣೆಯಿಂದ ಸುಲಭವಾಗಿ ನಡೆಯುತ್ತವೆ. ಕೆಲವು ವೈಯಕ್ತಿಕ ಸಮಸ್ಯೆಗಳನ್ನು ಕುಟುಂಬದೊಡನೆ ಚರ್ಚಿಸಿ ಪರಿಹಾರ ಹುಡುಕುವುದು ಒಳಿತು. ತೀರಾ ಸಂಕಷ್ಟವನ್ನು ಮನದಲ್ಲಿ ಇಟ್ಟುಕೊಳ್ಳುವುದರಿಂದ ಮಾನಸಿಕ ಸಂಬಂಧಿತ ಸಮಸ್ಯೆಗಳಲ್ಲಿ ಬಳಲುವ ಸಾಧ್ಯತೆ ಇದೆ. ಸಹವರ್ತಿಗಳಿಂದ ಉದ್ಯೋಗದಲ್ಲಿ ಅಪವಾದಗಳಿಗೆ ಗುರಿಯಾಗಲೂಬಹುದು. ಶುಭದಿನ: 04. ಹನುಮಾನ್ ಚಾಲೀಸ್ ಓದಿರಿ.





ಕಾರ್ಯಗಳನ್ನು ಯಶಸ್ವಿಯಾಗಿ ನಿಮ್ಮಂತೆ ಮಾಡಿಕೊಳ್ಳುವಿರಿ. ಕೊಟ್ಟಿರುವ ಕೆಲಸವನ್ನು ಪೂರ್ಣಗೊಳಿಸುವ ಸಾಧ್ಯತೆಯಿದೆ. ಮನಸ್ಸಿನಲ್ಲಿ ಉದ್ಭವವಾಗುವ ಆಸೆ ಆಮಿಷಗಳನ್ನು ನಿಯಂತ್ರಣದಲ್ಲಿಡುವುದು ಸೂಕ್ತ. ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಸಂಗಾತಿ ನಿಮ್ಮ ಯೋಜನೆಗೆ ಸಂಬಂಧಪಟ್ಟಂತೆ ಉತ್ತಮ ವಿಷಯಗಳನ್ನು ತಿಳಿಸಿಕೊಡುವ ಸಾಧ್ಯತೆಯಿದೆ. ಶುಭದಿನ: 05. ವಿಷ್ಣು ಸಹಸ್ರನಾಮ ಪಠಿಸಿರಿ.





ಕೆಲಸದಲ್ಲಿ ಪ್ರಬುದ್ಧತೆ ಮೆರೆಯುವಿರಿ. ಶಿಸ್ತು ಮತ್ತು ಸಂಯಮದಿಂದ ಜೀವನ ಕಟ್ಟಿಕೊಳ್ಳುವ ಪ್ರಯತ್ನ ಸಾಗಲಿ. ನಿಮ್ಮ ಪ್ರತಿಭೆಗೆ ಸೂಕ್ತ ವೇದಿಕೆ ದೊರೆಯುವುದು. ಪ್ರಮುಖ ಕಾರ್ಯಗಳನ್ನು ಮಾಡಿ ಮುಗಿಸುವಿರಿ. ವಾಹನ ಕ್ರಯ ವಿಕ್ರಯ ಯೋಗವಿದೆ. ಆಸ್ತಿ ಖರೀದಿ ಆಭರಣ ಖರೀದಿಗೆ ಸಕಾಲ. ಆರೋಗ್ಯ ಉತ್ತಮವಾಗಿರುತ್ತದೆ. ಕುಟುಂಬದಲ್ಲಿ ಸಂತಸ ಇರುವುದು. ಶುಭದಿನ: 07. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಕಾಲ ಬರಲಿ ಎಂದು ಸುಮ್ಮನೆ ಕೂರಬೇಡಿ. ಕೆಲಸದ ಬಗ್ಗೆ ಆದಷ್ಟು ಪರಿಶ್ರಮ ಪಡುವುದು ಒಳ್ಳೆಯದು. ನಿರೀಕ್ಷಿತ ಆದಾಯಗಳು ಈ ವಾರ ನಿಮ್ಮ ಕೈ ಸೇರುವ ಸಾಧ್ಯತೆ ಇದೆ. ಕುಟುಂಬದ ಕೆಲವು ವಿಚಾರಗಳಿಂದ ಮಾನಸಿಕ ತೊಂದರೆ ಅನುಭವಿಸುವಿರಿ. ಯೋಜನೆಗಳಲ್ಲಿ ಇತರರ ಹಸ್ತಕ್ಷೇಪದಿಂದ ಹಿನ್ನಡೆಯಾಗಬಹುದು. ಮಾನಸಿಕ ಸ್ಥಿರತೆಯನ್ನು ಕಾಪಾಡಿಕೊಳ್ಳಿ. ಶುಭದಿನ: 08. ಸೌಂದರ್ಯ ಲಹರಿ ಪಠಿಸಿರಿ.





ಮಾಡುವ ಕೆಲಸದಲ್ಲಿ ಟೀಕೆಗಳು ಬರಬಹುದು. ಆದಷ್ಟು ವಿಮರ್ಶೆಗಳನ್ನು ಜರಿಯದೆ, ನಿಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವುದು ಮುಖ್ಯ. ಸಹೋದರರೊಡನೆ ವೈಚಾರಿಕ ಭಿನ್ನಮತ ಉಂಟಾಗಬಹುದು. ಅಂದುಕೊಂಡ ಕೆಲಸಗಳು ಮಂದಗತಿಯಲ್ಲಿ ನಡೆಯಬಹುದು. ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುವವರಿಗೆ ವೇತನ ಹೆಚ್ಚಳವನ್ನು ನಿರೀಕ್ಷೆ ಮಾಡಬಹುದು. ಶುಭದಿನ: 06. ಲಿಂಗಾಷ್ಟಕ ಪಠಿಸಿರಿ.




ಸಂತೋಷ ಹಾಗೂ ಚೈತನ್ಯದಿಂದ ಕೆಲಸ ಮಾಡಲು ಮುಂದಾಗಿ. ಆರೋಗ್ಯದ ವಿಷಯವಾಗಿ ಜಾಗ್ರತೆ ವಹಿಸುವುದು ಸೂಕ್ತ. ಕುಟುಂಬದಲ್ಲಿ ಉದ್ಭವವಾಗುವ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಿ. ಸುಖಾಸುಮ್ಮನೆ ಕೋಪವೇಷ ವ್ಯಕ್ತಪಡಿಸುವುದು ಒಳಿತಲ್ಲ. ಉದ್ಯೋಗ ಸ್ಥಳದಲ್ಲಿ ಸ್ವಲ್ಪ ಮಟ್ಟಿಗೆ ಒತ್ತಡ ಕಾಣಿಸಿಕೊಳ್ಳಬಹುದು. ಆರೋಗ್ಯದಲ್ಲೂ ಏರುಪೇರಾಗುತ್ತದೆ. ಶುಭದಿನ: 07. ಗಣಪತಿಗೆ ದೂರ್ವಾರ್ಚನೆ ಮಾಡಿರಿ.





ಅಪರೂಪದ ವ್ಯಕ್ತಿಗಳನ್ನು ಭೇಟಿಯಾಗುತ್ತೀರಿ. ಈ ವಾರ ಲವಲವಿಕೆ ಹಾಗೂ ಚೈತನ್ಯದಿಂದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಸೂಕ್ತ. ಮಕ್ಕಳ ಉದ್ಯೋಗದ ಬಗ್ಗೆ ಚಿಂತೆ ಆವರಿಸಬಹುದು. ಮಿತ್ರರಿಂದ ಔತಣಕೂಟದ ಆಮಂತ್ರಣ ಸಿಗಲಿದೆ. ಹಳೆಯ ನೆನಪುಗಳು ಬಹು ಕಾಡಲಿದೆ. ಆಧ್ಯಾತ್ಮದ ವಿಚಾರ ಬಗ್ಗೆ ಗಮನಹರಿಸುವಿರಿ. ಶುಭದಿನ: 09. ಶಿವಕವಚ ಪಠಣ ಮಾಡಿರಿ.




ವಿದೇಶದ ಪ್ರವಾಸದ ಯೋಜನೆ ಸಕಾರಾತ್ಮಕವಾಗಿ ನಡೆಯಬಹುದು. ಆಸ್ತಿ ಮಾರಾಟದ ವಿಷಯದಲ್ಲಿ ಶುಭ ಫಲಿತಾಂಶ ಕಾಣಬಹುದು. ಮಕ್ಕಳ ಪ್ರಗತಿಗಾಗಿ ಹೆಚ್ಚಿನ ಹಣ ಖರ್ಚಾಗುವ ಸಾಧ್ಯತೆ. ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ತುಂಬ ಮುಖ್ಯವಾದ ಚರ್ಚೆ ಕೂಡ ನಡೆಸುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಹೆಚ್ಚು ಸಮಾಧಾನದಿಂದ ಕಾಣಿಸಿಕೊಳ್ಳುತ್ತೀರಿ. ಶುಭದಿನ: 08. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಓದಿನ ಕಡೆಗೆ ಉತ್ಸಾಹ ಹೆಚ್ಚಾಗುತ್ತದೆ. ಕೆಲವರ ಬಗ್ಗೆ ಈ ವಾರ ನಿಮಗೆ ಅನುಮಾನ ಮೂಡುವ ಸಾಧ್ಯತೆ ಕಾಣಬಹುದು. ಹೆಚ್ಚುವರಿ ಜವಾಬ್ದಾರಿ ನಿಮಗೆ ಸಿಗುವುದು. ಕನಸುಗಳನ್ನು ನನಸು ಮಾಡಿಕೊಳ್ಳುವ ಪ್ರಯತ್ನ ನಿಮ್ಮಿಂದ ಬೇಕಾಗಿದೆ. ಅನಿರೀಕ್ಷಿತವಾಗಿ ಪ್ರಯಾಣ ಮಾಡುವ ಸಾಧ್ಯತೆ ಕಾಣಬಹುದು. ಮಕ್ಕಳ ವಿಷಯದಲ್ಲಿ ಹೆಮ್ಮೆ ಮೂಡುವುದು ನಿಶ್ಚಿತ. ಶುಭದಿನ: 04. ನವದುರ್ಗಾ ಆರಾಧನೆ ಮಾಡಿರಿ.




ವಾರದ ಶುರುವಿನಿಂದಲೇ ನಿಮ್ಮ ಆರೋಗ್ಯ ಉತ್ತಮವಾಗಿರುತ್ತದೆ. ಆ ಕಾರಣಕ್ಕೆ ನೀವೂ ಸಂತೋಷವಾಗಿರುತ್ತೀರಿ. ಸದ್ಯಕ್ಕೆ ನೀವು ಎದುರಿಸುತ್ತಿರುವ ಬಿಕ್ಕಟ್ಟುಗಳು ನಿವಾರಣೆ ಆಗುತ್ತವೆ. ಆಲೋಚನೆಯಲ್ಲಿ ಸಕಾರಾತ್ಮಕವಾದ ಪ್ರಗತಿ ಕಾಣಿಸಿಕೊಳ್ಳುತ್ತದೆ. ದೈಹಿಕ ಸದೃಢತೆ ಬಗ್ಗೆ ಹೆಚ್ಚಿನ ಗಮನ ನೀಡುವ ಸಾಧ್ಯತೆ ಇದೆ. ನಿಮ್ಮ ಶಕ್ತಿ– ಚೈತನ್ಯ ಹೆಚ್ಚಾಗುತ್ತದೆ. ಶುಭದಿನ: 05. ಶನಿಸ್ತೋತ್ರ ಪಠಿಸಿರಿ.




ಸಂಬಂಧಿಕರಿಂದ ಶುಭ ಸುದ್ದಿಯನ್ನು ಕೇಳುತ್ತೀರಿ. ಈವರೆಗಿನ ಬಿಕ್ಕಟ್ಟು ಸಮಸ್ಯೆಗಳು ಶಮನವಾಗುತ್ತವೆ. ನಿಮ್ಮ ಸಾಮರ್ಥ್ಯ ವೃದ್ಧಿಯಾಗುತ್ತದೆ. ಇದರ ಜೊತೆಗೆ ಧೈರ್ಯ, ಮಾನಸಿಕ ದೃಢತೆ ಹೆಚ್ಚಲಿದೆ. ನಿಮ್ಮ ವಿರೋಧಿಗಳನ್ನು ಈ ಅವಧಿಯಲ್ಲಿ ಮಣಿಸುತ್ತೀರಿ. ಹಣಕಾಸು ಹೂಡಿಕೆ ಲಾಭದಾಯಕವಾಗಿ ಇರುತ್ತದೆ. ನಿಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಶುಭದಿನ: 08. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.